॥ ಶ್ರೀಮನ್ಮೂಲರಾಮೋ ವಿಜಯತೇ ॥ ॥ ಶ್ರೀಗುರುರಾಜೋ ವಿಜಯತೇ ॥

# ರಂಗ ಒಲಿದ ದಾಸರಾಯರು ಶ್ರೀಜಗನ್ನಾಥದಾಸರು

ನಾಗರಾಜು ಹಾವೇರಿ ( ಪಲ್ಲವೀಪ್ರಿಯ ) – 99010 – 52578

ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಹರಿದಾಸ ಸಾಹಿತ್ಯವು ತನ್ನದೇ ಆದ ವೈಶಿಷ್ಟ್ಯದಿಂದ ಮನಾಕರ್ಷಣೀಯವಾಗಿದೆ. ಶ್ರೀಮದಾನಂದತೀರ್ಥರಿಂದ ಪ್ರಣೀತವಾದ ದ್ವೈತಸಿದ್ಧಾಂತವನ್ನು ಭೂಯಿಷ್ಠವಾಗಿಟ್ಟುಕೊಂಡು ಹೊರಟ ಈ ಮಾರ್ಗವು ಸಮಗ್ರ ಸಿದ್ಧಾಂತವನ್ನು ಕನ್ನಡ ಭಾಷೆಯಲ್ಲಿ ಬಹುಪರಿಣಾಮಕಾರಿಯಾಗಿ ಅಭಿವ್ಯಕ್ತಪಡಿಸುವುದೇ ಇದರ ಹಿರಿಮೆ. ಕೇವಲ ಸಿದ್ಧಾಂತವನ್ನಷ್ಟೆ ತನ್ನ ಧ್ಯೇಯವಾಗಿಟ್ಟುಕೊಂಡು ಹೊರಟಿದ್ದರೇ ಈ ಸಾಹಿತ್ಯಕ್ಕೆ ಇಷ್ಟೊಂದು ಬೆಲೆ – ಮನ್ನಣೆ ಸಿಗುತ್ತಿರಲಿಲ್ಲ. ಸಾಮಾಜಿಕವಾಗಿ, ನೈತಿಕವಾಗಿ ಬಹು ಮೌಲಿಕ ವಿಚಾರಗಳನ್ನು ತನ್ನ ಅಭಿವ್ಯಕ್ತಿಯಲ್ಲಿ ಅಳವಡಿಸಿಕೊಂಡ ಈ ಸಾಹಿತ್ಯವು ಸಮಾಜದ ಎಲ್ಲಾ ಸ್ತರಗಳನ್ನು ಜನರ ಮನಸ್ಸಿಗೆ ಮುಟ್ಟಿ, ಅವರನ್ನು ಜಾಗೃತಗೊಳಿಸಿದ್ದು ಇದರ ಹಿರಿಮೆ.

ಆಚಾರ್ಯ ಮಧ್ವರ ನಂತರ ಪೀಠಕ್ಕೆ ಬಂದ ನರಹರಿತೀರ್ಥರು " ರಘುಪತಿ " ಅಂಕಿತದೊಂದಿಗೆ ಅನೇಕ ಕೀರ್ತನೆಗಳನ್ನು ರಚಿಸಿ ಹರಿದಾಸ ಸಾಹಿತ್ಯಕ್ಕೆ ನಾಂದಿ ಹಾಡಿದರು. ಅವರ ಕೆಲವೊಂದು ಕೃತಿಗಳು ಉಪಲಬ್ಧವಿದೆ. ನಂತರ ಶ್ರೀಪಾದರಾಜರು " ರಂಗವಿಠಲ " ಅಂಕಿತದೊಂದಿಗೆ ಪದ – ಪದ್ಯ – ಸುಳಾದಿ – ಉಗಾಭೋಗ – ಷಟ್ಪದಿಗಳನ್ನು ರಚಿಸಿ ಹರಿದಾಸ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ನಂತರದಲ್ಲಿ ಬಂದ ಶ್ರೀ ವ್ಯಾಸರಾಜರು " ಸಿರಿಕೃಷ್ಣ " ಅಂಕಿತದೊಂದಿಗೆ ದಾಸಸಾಹಿತ್ಯವನ್ನು ಬೆಳೆಸುವುದರೊಂದಿಗೆ ದಾಸಸಾಹಿತ್ಯ ಕ್ಷೇತ್ರಕ್ಕೆ ಕನಕ – ಪುರಂದರ ಎರಡು ಅಮೂಲ್ಯ ರತ್ನಗಳ ಕಾಣಿಕೆಯನ್ನಾಗಿ ನೀಡಿ ದಾಸಸಾಹಿತ್ಯದ ಸುವರ್ಣಯುಗವನ್ನು ನಿರ್ಮಿಸಿದರು.

ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕಾಣಿಕೆಯನ್ನು ನೀಡಿದ ಶ್ರೀ ಪುರಂದರದಾಸರು ಮತ್ತು ಶ್ರೀ ಕನಕದಾಸರು ತಾವು ಬದುಕಿದ ಅಂದಿನ ಸಮಾಜದೊಡನೆ ಸಂಪೂರ್ಣ ಬೆರೆತು ಜಾತಿ – ಮತ – ಪಂಥಗಳ ಬೇಧವೆಣಿಸದೇ ಎಲ್ಲಾ ಜನರೊಡನೆ ಸ್ಪಂದಿಸಿ ದಾಸಸಾಹಿತ್ಯದ ಮೇರೆಗಳನ್ನು ಕನ್ನಡ ರಾಜ್ಯಕ್ಕೆ ಮಾತ್ರ ಸೀಮಿತಗೊಳಿಸದೇ ರಾಷ್ಟ್ರವ್ಯಾಪಿ ಸಾಹಿತ್ಯವಾಗಿ ವಿಸ್ತರಿಸಿದರು. ಕನಕ – ಪುರಂದರ ಯುಗ ಎಂದು ಕರೆಯುವಷ್ಟರ ಮಟ್ಟಿಗೆ ಅವರು ನಿರ್ಮಿಸಿದ ಸಾಹಿತ್ಯ ಅಷ್ಟೇ ಪ್ರಭಾವಶಾಲಿಯೂ ಮತ್ತು ಜನಪ್ರಿಯವಾಗಿದೆ.

ಮುಂದೆ 18ನೇ ಶತಮಾನದಲ್ಲಿ ಅವತರಿಸಿದ ಶ್ರೀ ವಿಜಯದಾಸರು ಹಿಂದಿನಿಂದ ನಡೆದು ಬಂದ ಈ ಹರಿದಾಸ ಸಾಹಿತ್ಯವು ಇಂದಿನ ವರೆಗೂ ಮುಂದುವರೆಯುವಂತೆ ಮಾಡಿ ತಮ್ಮ ಪದ – ಪದ್ಯ – ಸುಳಾದಿಗಳ ಮೂಲಕ ದಾಸ ಸಾಹಿತ್ಯ ಸಂಪತ್ತನ್ನು ಬೆಳೆಸುವುದರೊಂದಿಗೆ ಅಮೂಲ್ಯವಾದ ಶಿಷ್ಯ ಸಂಪತ್ತನ್ನು ಬೆಳಸಿ ಹರಿದಾಸ ಸಾಹಿತ್ಯದ ಬೆಳವಣಿಗೆಗೆ ಅಪರೂಪದ ಕಾಣಿಕೆಯನ್ನು ನೀಡಿದ್ದಾರೆ. ಈ ಸತ್ಪರಂಪರೆಯಲ್ಲಿ ಅನೇಕ ಹರಿದಾಸರುಗಳು ಬಾಳಿ ಬದುಕಿದರು. ಅಂತೆಯೇ ಹರಿದಾಸಸಾಹಿತ್ಯಕ್ಕೆ ಅತ್ಯಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ.

ಅವರ ಶಿಷ್ಯರೇ ಶ್ರೀಗೋಪಾಲದಾಸರು. ಇವರ ಶಿಷ್ಯರೇ ಶ್ರೀಹರಿಕಥಾಮೃತಸಾರದ ಕರ್ತೃಗಳಾದ ಶ್ರೀ ಜಗನ್ನಾಥದಾಸರು. ಇಪ್ಪತ್ತನೇಯ ಶತಮಾನದ ವರೆಗೂ ಈ ಪರಂಪರೆಯು ಮುಂದುವರೆದು ಬಂದಿರುವುದೇ ಈ ಪರಂಪರೆಯ ವೈಶಿಷ್ಟ್ಯ.

18ನೇ ಶತಮಾನದಲ್ಲಿ ಅವತರಿಸಿದ ಶ್ರೀಜಗನ್ನಾಥದಾಸರು ತಮ್ಮ ಜೀವನ – ಕೃತಿಗಳಿಂದ ಹರಿದಾಸ ಸಾಹಿತ್ಯವನ್ನು ಮತ್ತಷ್ಟು ಶ್ರೀಮಂತಗೊಳಿಸಿ ವಿಜೃಂಭಿಸುವಂತೆ ಮಾಡಿದರು. ಅವರ ಜೀವನ – ಸಾಧನೆ – ಕೃತಿಗಳ ಬಗ್ಗೆ ಸಂಕ್ಷಿಪ್ತವಾಗಿ ಅವರ ಅನುಗ್ರಹದಿಂದ ತಿಳಿಸಲು ಪ್ರಯತ್ನಿಸುತ್ತೇನೆ.

| | | |
|---|---|---|
| ಹೆಸರು | : | ಶ್ರೀ ಶ್ರೀನಿವಾಸಾಚಾರ್ಯರು |
| ತಂದೆ | : | ಶ್ರೀ ನರಸಿಂಹಾಚಾರ್ಯ ( ನರಸಿಂಹದಾಸರು ) |
| ತಾಯಿ | : | ಲಕ್ಷ್ಮಕ್ಕಮ್ಮ ( ಲಕ್ಷ್ಮೀಬಾಯಿ ) |
| ಜನ್ಮಸ್ಥಳ | : | ಬ್ಯಾಗವಟ್ಟಿ– ತಾ॥ ಮಾನವಿ – ಜಿ॥ ರಾಯಚೂರು |
| ತಂದೆಯವರ ವಿದ್ಯಾ / ಸ್ವರೂಪೋದ್ಧಾರಕ ಗುರುಗಳು | : | ಶ್ರೀರಾಘವೇಂದ್ರಸ್ವಾಮಿಗಳವರ ಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಸುಮತೀಂದ್ರತೀರ್ಥರು. |
| ದಾಸರ ವಿದ್ಯಾ ಗುರುಗಳು | : | ವಿದ್ವಾನ್ ಶ್ರೀ ಬಲರಾಮಾಚಾರ್ಯರು |

( ಮುಂದೆ ಇವರೇ ಶ್ರೀವರದೇಂದ್ರತೀರ್ಥರಾಗಿ ಶ್ರೀರಾಘವೇಂದ್ರಸ್ವಾಮಿಗಳವರ ಮಠದ ಪೀಠಾಧಿಪತಿಗಳಾದರು. )

ಶ್ರೀ ಸುಮತೀಂದ್ರತೀರ್ಥರು ನರಸಿಂಹಾಚಾರ್ಯರ ಜ್ಞಾನ–ಭಕ್ತಿ–ವೈರಾಗ್ಯವನ್ನು ಕಂಡು ಸಂತೋಷಪಟ್ಟು ಶ್ರೀನರಸಿಂಹದೇವರ ವಿಗ್ರಹವನ್ನು ಕೊಟ್ಟಿದ್ದಾರೆ. ಈ ಶ್ರೀನರಸಿಂಹದೇವರು ಇಂದಿಗೂ ಶ್ರೀ ಜಗನ್ನಾಥದಾಸರ ಸನ್ನಿಧಾನ – ಮಾನವಿಯಲ್ಲಿ ಪೂಜೆಗೊಳ್ಳುತ್ತಿದ್ದಾನೆ.

ಶ್ರೀನರಸಿಂಹಾಚಾರ್ಯರು ಸದಾಚಾರ ಸಂಪನ್ನರು ಹಾಗೂ ಸಾತ್ವಿಕ ಸ್ವಭಾವದವರು. ಇವರ ಜ್ಞಾನ – ಭಕ್ತಿ – ವೈರಾಗ್ಯಾದಿ ಗುಣಗಳಿಂದ ಶ್ರೀ ರಾಘವೇಂದ್ರಸ್ವಾಮಿಗಳವರ ಮಠದ ಪೀಠಾಧಿಪತಿಗಳಾದ ಶ್ರೀ ಸುಮತೀಂದ್ರತೀರ್ಥರು ಹಾಗೂ ಶ್ರೀ ಉಪೇಂದ್ರತೀರ್ಥರಿಗೆ ಅಚ್ಚುಮೆಚ್ಚಿನ ಶಿಷ್ಯರಾಗಿದ್ದರು. ಆ ಕಾಲದಲ್ಲಿ ಶ್ರೀ ತಿಮ್ಮಣ್ಣದಾಸರು ಎಂಬ ಮಹಾನ್ ಸಾಧಕರೊಬ್ಬರಿದ್ದರು. ಇವರು ಶ್ರೀ ವಿಜಯದಾಸರ ಪರಮಾನುಗ್ರಹಕ್ಕೆ ಪಾತ್ರರಾಗಿದ್ದರು. ಶ್ರೀ ನರಸಿಂಹಾಚಾರ್ಯರು ಶ್ರೀ ತಿಮ್ಮಣ್ಣದಾಸರಲ್ಲಿ ಬಂದು ಶಿಷ್ಯತ್ವ ವಹಿಸಿ ಧನ್ಯರಾದರು. ಹೀಗಿರುವಾಗ ಒಂದುದಿನ ಶ್ರೀ ನರಸಿಂಹಾಚಾರ್ಯರ ಸ್ವಪ್ನದಲ್ಲಿ ಶ್ರೀ ಪುರಂದರದಾಸರು ಕಾಣಿಸಿಕೊಂಡು ಶ್ರೀನರಸಿಂಹವಿಠಲ ಎಂದು ಅಂಕಿತ ಹಾಗೂ ದಾಸದೀಕ್ಷೆ ಪ್ರದಾನ ಮಾಡಿ ಶ್ರೀಹರಿವಾಯುಗುರುಗಳ ಸೇವೆ ಮಾಡೆಂದು ಆಜ್ಞಾಪಿಸಿದರು. ಅಂದಿನಿಂದ ಶ್ರೀ ನರಸಿಂಹಾಚಾರ್ಯರು ಶ್ರೀನರಸಿಂಹದಾಸರೆಂದು ಪ್ರಖ್ಯಾತರಾದರು.

## ನಮ್ಮ ಕಥಾನಾಯಕರ ಜನನ, ವಿದ್ಯಾಭ್ಯಾಸ, ವಿವಾಹ

ಶ್ರೀನರಸಿಂಹಾಚಾರ್ಯ ದಂಪತಿಗಳಿಗೆ ಜೀವನದಲ್ಲಿ ಎಲ್ಲಾ ಸೌಭಾಗ್ಯಗಳಿದ್ದರೂ ಪುತ್ರ ಸಂತಾನವಿರಲಿಲ್ಲ. ಇವರು ವಂಶೋದ್ಧಾರಕ ಪುತ್ರನನ್ನು ಅನುಗ್ರಹಿಸಬೇಕೆಂದು ತಮ್ಮ ಕುಲದೈವನಾದ ಶ್ರೀಶ್ರೀನಿವಾಸನಲ್ಲಿ ಪ್ರಾರ್ಥಿಸಿ, ಏಕಾಗ್ರಚಿತ್ತ ಹಾಗೂ ಭಕ್ತಿ_ಶ್ರದ್ಧೆಗಳಿಂದ ಸೇವೆಗೈದರು. ಇವರ ಸೇವೆಯಿಂದ ಸುಪ್ರೀತನಾದ ಶ್ರೀ ಶ್ರೀನಿವಾಸನು ಈ ದಂಪತಿಗಳಿಗೆ ಜಗದ್ವಂದ್ಯನಾದ ಸತ್ಪುತ್ರನು ಜನಿಸುವನೆಂದು ಸೂಚನೆಯನ್ನಿತ್ತನು. ಶ್ರೀಶ್ರೀನಿವಾಸನ ಪರಮಾನುಗ್ರಹದಿಂದ ಶಾಲಿವಾಹನ ಶಕೆ 1650ನೇ ಕೀಲಕ ನಾಮ ಸಂವತ್ಸರ ಶ್ರಾವಣ ಶುದ್ಧ ದ್ವಿತೀಯಾ ನಮ್ಮ ಕಥಾನಾಯಕರು ಮತ್ತು ಶ್ರೀಹರಿಕಥಾಮೃತಸಾರ ಕರ್ತೃಗಳಾದ ಶ್ರೀಜಗನ್ನಾಥದಾಸರ ಜನನವಾಯಿತು. ಶ್ರೀ ನರಸಿಂಹದಾಸರಿಗೆ ಪುತ್ರರತ್ನ ಜನಿಸಿದ್ದರಿಂದ ಅವರಿಗೆ ಆದ ಸಂತೋಷ ಅಷ್ಟಿಷ್ಟಲ್ಲ.

ಶುಕ್ಲಪಕ್ಷದಲ್ಲಿ ಜನಿಸಿದ ಆ ಬಾಲಕನು ಶುಕ್ಲಪಕ್ಷದ ಚಂದ್ರನಂತೆ ಬೆಳೆಯುತ್ತಿದ್ದ ಅವನಿಗೆ ಸಕಾಲದಲ್ಲಿ ನಾಮಕರಣ, ಅನ್ನಪ್ರಾಶನ, ಅಕ್ಷರಾಭ್ಯಾಸ, ಚೌಲ, ಉಪನಯನ ಮಾಡಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಶ್ರೀ ನರಸಿಂಹದಾಸರೇ ಹೇಳಿ ಕೊಟ್ಟರು. ಬಾಲ್ಯದಲ್ಲಿಯೇ ಇವನಿಗೆ ಕವಿತಾ ರಚನೆ ಸಾಮರ್ಥ್ಯವು ಸ್ವಾಭಾವಿಕವಾಗಿಯೇ ಪ್ರಾಪ್ತವಾಗಿತ್ತು. ಈ ಬಾಲಕನ ಬುದ್ಧಿ ಚಾತುರ್ಯವನ್ನು ಕಂಡು ಶ್ರೀಮದಾಚಾರ್ಯರ ಶಾಸ್ತ್ರಾಭ್ಯಾಸಕ್ಕಾಗಿ ಮಂತ್ರಾಲಯ ಶ್ರೀಗುರುಸಾರ್ವಭೌಮ ವಿದ್ಯಾಪೀಠದ ಕುಲಪತಿಗಳಾದ ಶ್ರೀ ವಾದೀಂದ್ರತೀರ್ಥರಲ್ಲಿ ಬಿಟ್ಟರು. ಇದರಿಂದ ಶ್ರೀವಾದೀಂದ್ರತೀರ್ಥರಿಗೆ ಬಹಳ ಸಂತೋಷವಾಯಿತು. ಕಾರಣ ಶ್ರೀಮಠದ ಶಿಷ್ಯರಾದ ಶ್ರೀನರಸಿಂಹದಾಸರು ತಮ್ಮ ಪರಮಗುರುಗಳಾದ ಶ್ರೀಸುಮತೀಂದ್ರತೀರ್ಥರೂ ಮತ್ತು ತಮ್ಮ ಗುರುಗಳಾದ ಶ್ರೀ ಉಪೇಂದ್ರತೀರ್ಥರಿಗೆ ಅತ್ಯಂತ ಪ್ರಿಯರಾಗಿದ್ದರು.

ಮುಂದೆ ಶ್ರೀನಿವಾಸಾಚಾರ್ಯರು ವಿದ್ವಾನ್ ಶ್ರೀ ಬಲರಾಮಾಚಾರ್ಯರಲ್ಲಿ ಶಾಂತಿ ಪೂರ್ವಕವಾಗಿ ಪಾಠ ಪ್ರಾರಂಭವಾಗಿ ಸತತ 12 ವರ್ಷಗಳ ವರೆಗೆ ಅವಿಚ್ಛಿನ್ನ ಮತ್ತು ಕ್ರಮವಾಗಿ ಶಾಸ್ತ್ರ – ವೇದ – ಉಪನಿಷತ್ – ಪುರಾಣ – ಬ್ರಹ್ಮಸೂತ್ರ – ಸರ್ವಮೂಲ – ವೇದಾಂತ ವಿದ್ಯಾಧ್ಯಯನದಲ್ಲಿ ಅದ್ವಿತೀಯ ಪಾಂಡಿತ್ಯ ಸಂಪಾದಿಸಿ ಗುರುಗಳ ಪರಮಾನುಗ್ರಹಕ್ಕೆ ಪಾತ್ರರಾದರು.

ಸಕಾಲದಲ್ಲಿ ಪ್ರಾಪ್ತವಯಸ್ಕರಾದ ಶ್ರೀನಿವಾಸಾಚಾರ್ಯರಿಗೆ ಚಿಕ್ಕಬಳ್ಳಾಪುರದ ಬೆಟ್ಟದಾಚಾರ್ಯರ ಮನೆತನದವರಾದ ಶ್ರೀರಾಮಾಚಾರ್ಯರ ಮಗಳಾದ ಕಮಲಮ್ಮ ನವರ ಜೊತೆಯಲ್ಲಿ ವಿವಾಹವಾಗಿ ಗೃಹಸ್ಥಾಶ್ರಮ ಧರ್ಮವನ್ನು ಸ್ವೀಕರಿಸಿದರು. ಇವರ ಧರ್ಮಪತ್ನಿಯು ಕೂಡಾ ಆಚಾರ್ಯರ ಮನೋಭಾವಕ್ಕೆ ತಕ್ಕಂತೆ ನಡೆದುಕೊಳ್ಳುತ್ತಿದ್ದರು. ಆಚಾರ್ಯರು ಅಥಿತಿ, ಅಭ್ಯಾಗತ, ವಿದ್ಯಾರ್ಥಿಗಳನ್ನು ಅತ್ಯಂತ ಪ್ರೀತಿ ಅಂತಃಕರಣದಿಂದ ನೋಡುತ್ತಿದ್ದರು.

# ಶ್ರೀ ವಿಜಯದಾಸರ ಕಾರುಣ್ಯ

ಶ್ರೀ ಶ್ರೀನಿವಾಸಾಚಾರ್ಯರಿಗೆ ಸಂಸ್ಕೃತ ಭಾಷಾ ಸಾಹಿತ್ಯದ ಮೇಲೆ ಬಹಳ ಅಭಿಮಾನ. ಅಂತೆಯೇ ಬೇರೇ ಭಾಷೆಗಳ ಮೇಲೆ ಅಷ್ಟೇ ತಿರಸ್ಕಾರ ಮನೋಭಾವದಿಂದ ಅಸೂಯೆ ಪಡುತ್ತಿದ್ದರು. ಆ ಕಾಲದಲ್ಲಿ ಭೃಗು ಮುನಿಗಳಾಂಶ ಸಂಭೂತರೂ ಮತ್ತು ಬ್ರಹ್ಮದೇವರ ವಿಶೇಷ ಸನ್ನಿಧಾನಯುಕ್ತರಾದ ಶ್ರೀ ವಿಜಯದಾಸರು ಅತ್ಯಂತ ಶ್ರೇಷ್ಠ ಹರಿದಾಸರಾಗಿ ಅನೇಕ ಶಿಷ್ಯಸಂಪತ್ತನ್ನೊಂದಿ ಸಮಾಜದಲ್ಲಿರುವ ಎಲ್ಲಾ ಜಾತಿ, ಮತ, ಕುಲ, ಪಂಥಗಳ ಜನರನ್ನು ಉದ್ಧಾರ ಮಾಡುತ್ತಾ ಹರಿದಾಸ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದರು.

ಯಾವ ದೋಷವೂ ಇಲ್ಲದ ಆಚಾರ್ಯರಲ್ಲಿ ಅಹಂಭಾವ, ಅಸೂಯೆಗಳು ನೆಲೆಯೂರಿತ್ತು. ಸಾಧನಕ್ಕೆ ಪ್ರತಿಬಂಧಕವಾದ, ದೈವಾಂಶ ಸಂಭೂತ ಮತ್ತು ಮುಮುಕ್ಷುಗಳಾದ ಆಚಾರ್ಯರು ಈ ರೀತಿ ನಡೆದುಕೊಳ್ಳುತ್ತಿರುವುದು ಶ್ರೀಹರಿಗೆ ಇಷ್ಟವಾಗಲಿಲ್ಲ. ತಾನೇ ಸ್ವತಃ ಭಕ್ತಪರಾಧೀನನಾದುದರಿಂದ ಇದನ್ನು ಪರಿಹರಿಸಿ, ಹರಿದಾಸರ ಮಹಿಮೆಗಳನ್ನು ಜಗತ್ತಿಗೆ ತೋರಬೇಕೆಂದು ಶ್ರೀಹರಿಯು ಸಂಕಲ್ಪಿಸಿ ಶ್ರೀವಿಜಯದಾಸರಲ್ಲಿ ಪ್ರಕಟನಾಗಿ ಶೀಘ್ರವಾಗಿ ಆಚಾರ್ಯರನ್ನು ಉದ್ಧಾರ ಮಾಡಬೇಕೆಂದು ಸೂಚಿಸಿದನು. ಅದರಂತೆ ಶ್ರೀವಿಜಯದಾಸರು ಶ್ರೀಹರಿಯ ಆದೇಶದಂತೆ ಕಾರ್ಯಪ್ರವೃತರಾದರು.

ಶ್ರೀವಿಜಯದಾಸರು ಶ್ರೀಹರಿಯ ಆದೇಶ ಹೊತ್ತು ಮಾನವಿಗೆ ಬಂದರು. ಶ್ರೀವಿಜಯದಾಸರು ಯಾವ ಊರಿಗೆ ಹೋದರು ಆ ಪ್ರದೇಶವನ್ನು ಪಾವನಗೊಳಿಸುತ್ತಿದ್ದರು. ಭಜನೆಯ ಮೂಲಕ ಗ್ರಾಮಪ್ರದಕ್ಷಿಣೆ ಮಾಡುತ್ತಾ ಯಾಯವಾರ ಕ್ರಮದಿಂದ ಗೋಪಾಳವನ್ನು ಬೇಡಿತಂದು ಶ್ರೀಹರಿವಾಯುಗುರುಗಳಿಗೆ ಅರ್ಪಿಸಿ ತಾವೂ ಸ್ವೀಕರಿಸೀ ಮಾನವಿ ಜನರಿಗೆ ಸಂತರ್ಪಣೆ ಮಾಡುತ್ತಿದ್ದರು.

ಮಾನವಿಯ ಎಲ್ಲಾ ಮನೆಗಳಲ್ಲಿ ಗೋಪಾಳ ಸ್ವೀಕರಿಸಿ ತಮ್ಮ ಮುಖ್ಯೋದ್ದೇಶ ನಿರ್ವಹಣೆಗಾಗಿ ಶ್ರೀನಿವಾಸಾಚಾರ್ಯರ ಮನೆಯ ಕಡೆಗೆ ಬಂದರು. ಶ್ರೀನಿವಾಸಾಚಾರ್ಯರಿಗೆ ಶ್ರೀವಿಜಯದಾಸರ ಬಗ್ಗೆ ಮೊದಲೇ ಅಸೂಯೆ ತುಂಬಿತ್ತು ಜೊತೆಯಲ್ಲಿ ವಿದ್ಯಾಮದವು. ಇವರೆದುರಿಗೆ ಗೋಪಾಳಕ್ಕೆ ಬಂದ ಬಡದಾಸರನ್ನು ಆಚಾರ್ಯರು ಲೆಕ್ಕಿಸುತ್ತಾರೆಯೇ? ಒಬ್ಬ ಶಿಷ್ಯನನ್ನು ಕರೆದು ದಾಸನು ಬಂದಿದ್ದಾನೆ ಒಂದಿಡಿ ಅಕ್ಕಿ ಹಾಕಿ ಮುಂದಕ್ಕೆ ಕಳುಹಿಸು ಎಂದು ಕುಳಿತಲ್ಲೇ ಅಪ್ಪಣೆ ಕೊಟ್ಟರು. ದೊಡ್ಡವರು ಮನೆಗೆ ಬಂದಾಗ ಮೇಲೇಳದೆಯೇ ಕುಳಿತಿರುವುದೇ ಮಹಾಪರಾಧವಾಗುತ್ತದೆ. ಆದರೂ ಭವಿಷ್ಯವನ್ನರಿತ ಶ್ರೀವಿಜಯದಾಸರು ನಗುನಗುತ್ತಾ " ಆಚಾರ್ಯರೇ ಶ್ರೀಪ್ರಾಣದೇವರ ಗುಡಿಯಲ್ಲಿ ಶ್ರೀಹರಿಗೆ ನೈವೇದ್ಯವುಂಟು. ಕಾರಣ ತಾವು ದಯಮಾಡಿ ಭೋಜನಕ್ಕೆ ಬರಬೇಕೆಂದು ಆಹ್ವಾನಿಸಿದರು. ಅದಕ್ಕೆ ಆಚಾರ್ಯರು ಸರಿ–ಸರಿ ನಿನ್ನ ನೈವೇದ್ಯ ನಮಗೆ ಗೊತ್ತೇ ಇದೆ. ಹೊತ್ತಿಗೆ ಸರಿಯಾಗಿ ಊಟ ಮಾಡದಿದ್ದರೇ ನಮಗೆ ಉದರ ಶೂಲೆ ಬರುತ್ತದೆ. ನಿನ್ನ ನೈವೇದ್ಯಕ್ಕಾಗಿ ನಾವು ಕಾಯಲು ಆಗುವುದಿಲ್ಲ. ದಯಮಾಡಿ ಮುಂದಕ್ಕೆ ಹೋಗು ಎಂದು ಅಹಂಕಾರದಿಂದ ಏಕವಚನದಲ್ಲಿ ಹೇಳಿದರು. ತರುವಾಯ ಶ್ರೀಹರಿಯ ಸಂಕಲ್ಪವನ್ನರಿತ ಶ್ರೀವಿಜಯದಾಸರು ತಮ್ಮ ಪಾಡಿಗೆ ತಾವು ಹೊರಟು ಹೋದರು. ಆದರೆ ಇಂಥಾ ಅಲ್ಪರು ನಮ್ಮಂಥಾ ವಿದ್ವಾಂಸರನ್ನು ಊಟಕ್ಕೆ ಕರೆಯಲು ಸ್ವಲ್ಪವೂ ಭಯಪಡುವುದಿಲ್ಲವಲ್ಲಾ? ಇದೇನಾಶ್ಚರ್ಯ ಎಂದು ಶ್ರೀವಿಜಯದಾಸರನ್ನು ಅವಹೇಳನ ಮಾಡಿದರು. ಶ್ರೀವಿಜಯದಾಸರು ಆಚಾರ್ಯರಿಗೆ ದೂರದವರೇನೂ ಅಲ್ಲಾ. ಸ್ವತಃ ಸೋದರ ಮಾವನವರು ".

ಭಗವದ್ಭಕ್ತರ ನಿಂದನೆ ಬ್ರಹ್ಮಹತ್ಯಾ ದೋಷಕ್ಕೆ ಸಮಾನವಾದದ್ದು. ಕಾರಣ ಸಾಮಾನ್ಯ ಬ್ರಾಹ್ಮಣನನ್ನು ನಿಂದನೆ ಮಾಡಿದರೇನೇ ಬ್ರಹ್ಮಹತ್ಯಾ ದೋಷ ಬರುತ್ತದೆಂದು ಶಾಸ್ತ್ರ ಸಾರಿ ಹೇಳುತ್ತಿದೆ ಎಂದ ಮೇಲೆ ಅಪರೋಕ್ಷಜ್ಞಾನಿಗಳು, ಬ್ರಹ್ಮಸನ್ನಿಧಾನಯುಕ್ತರಾದ ಭೃಗ್ವಾಂಶ ಸಂಭೂತ ಶ್ರೀವಿಜಯದಾಸರಲ್ಲಿ ಶ್ರೀನಿವಾಸಾಚಾರ್ಯರು ನಡೆದು ಕೊಂಡ ರೀತಿ ಅಕ್ಷಮ್ಯ ಅಪರಾಧ ಮತ್ತೂ ಬ್ರಹ್ಮಹತ್ಯಾ ದೋಷಕ್ಕೂ ಮಿಗುಲು. ಅಲ್ಲದೇ ಯಾರ ಉದ್ಧಾರ ಮಾಡಲು ಶ್ರೀಹರಿಯ ಆದೇಶ ಹೊತ್ತು ಮಾನವಿಗೆ ಬಂದಿದ್ದಾರೋ ಅವರಿಂದ ಆದ ಈ ಕೃತ್ಯಕ್ಕೆ ಶ್ರೀವಿಜಯದಾಸರು ವಿಚಲಿತರಾಗದೇ ಮಾತೃವಾತ್ಸಲ್ಯ ತೋರಿದರು. ಆದರೆ ಶ್ರೀಗೋಪಾಲದಾಸರು ಮಾತ್ರ ತಮ್ಮ ಗುರುನಿಂದನೆಯನ್ನು ಕೇಳಿ " ಯೋಗ್ಯ ಕರುಣಾಳುಗಳಾದ ನಮ್ಮ ಗುರುಗಳು ನಿಮಗೆ ಆದರಪೂರ್ವಕವಾಗಿ ಭೋಜನಕ್ಕೆ ಆಮಂತ್ರಣವಿತ್ತರೇ ಅದನ್ನು ಧಿಕ್ಕರಿಸಿ ಅವರ ನಿಂದನೆಯನ್ನು ಮಾಡಿದ್ದೀರಲ್ಲವೇ? ಆ ಮಹನೀಯರನ್ನು ಅಪಹಾಸ್ಯ ಮಾಡಬೇಕೆಂದು ವೇಳೆ ಮೀರಿ ಊಟ ಮಾಡಿದರೇ ಉದರ ಶೂಲೆ ಬರುತ್ತದೆ ಎಂದು ಸುಳ್ಳು ನುಡಿದಿದ್ದೀರಲ್ಲವೇ? ಆ ಸುಳ್ಳೇ ಸತ್ಯವಾಗಲೀ ಅನುಭವಿಸಿ ಎಂದು ಮನನೊಂದು " ನುಡಿದರು.

ಭಗವದ್ಭಕ್ತರಾದ ಶ್ರೀಗೋಪಾಲದಾಸರು ವಾಕ್ಸಿದ್ಧಿ ಪುರುಷರು. ಅಧಿಕಾರದಲ್ಲಿ ದೊಡ್ಡವರಾದರೂ ಭಕ್ತನಾದ ಅಂಬರೀಷನನ್ನು ಕೆಣಕಿದ ದುರ್ವಾಸರೇ ಬಹಳ ಕಷ್ಟಪಟ್ಟರೆಂದ ಮೇಲೆ ಸೋತ್ತಮರಾದ ಶ್ರೀವಿಜಯದಾಸರ ನಿಂದನೆಯಿಂದ ಶ್ರೀನಿವಾಸಾಚಾರ್ಯರ ಗತಿ ಏನಾಗಬೇಕು? ಕೆಲವೇ ದಿನಗಳಲ್ಲಿ ಆಚಾರ್ಯರಿಗೆ ಉದರ ಶೂಲೆಯು ಪ್ರಾರಂಭವಾಗಿ ಬೆಳೆಯುತ್ತಾ ಹೋಯಿತು. ನೋವಿನಿಂದ ಮಲಗಿದರೂ ಏಳಲಾಗದ ಸ್ಥಿತಿ. ಜೊತೆಯಲ್ಲಿ ಜ್ವರ ಇದರಿಂದ ಉದರ ಶೂಲೆ ಕ್ಷಯಕ್ಕೆ ತಿರುಗಿತು. ದೇಹಾಲಸ್ಯದಿಂದ ಶಿಷ್ಯರಿಗೆ ಪಾಠ ಹೇಳಲು ದುಸ್ತರವಾಯಿತು. ಶ್ರೀಹರಿಯೂ ಇವರ ಸೇವೆ ಒಲ್ಲನೆಂಬಂತೆ ಆಚಾರ್ಯರು ನಿತ್ಯ ಕರ್ಮಾನುಷ್ಠಾನವನ್ನು ಬಿಡಬೇಕಾಯಿತು.

ಆಚಾರ್ಯರು ಕಳಾಹೀನರಾಗಿ ಅನೇಕ ಔಷಧಗಳನ್ನು ಸ್ವೀಕರಿಸಿದರು. ಯಾವುದೂ ಫಲಕಾರಿಯಾಗಲಿಲ್ಲ. ಕೊನೆಗೆ ಆಚಾರ್ಯರ ತಾಯಿ ಮತ್ತು ಅವರ ಪತ್ನಿಯವರು ಇದು ಹರಿವಾಯುಗುರುಗಳಲ್ಲಿ ಮಾಡಿದ ಅಪರಾಧವೆಂದು ತಿಳಿದು ಯಾರ ಪರಮಾನುಗ್ರಹದಿಂದ ಆಚಾರ್ಯರ ಜನ್ಮವಾಯಿತೋ ಆ ಶ್ರೀನಿವಾಸನ ಸೇವೆಯಿಂದ ವ್ಯಾಧಿ ಪರಿಹಾರವಾಗುವುದೆಂದು ಭಾವಿಸಿ ತಿರುಪತಿಯ ಶ್ರೀನಿವಾಸನ ಸೇವೆ ಮಾಡಿ ಮುಂದೆ ಘಟಿಕಾಚಲದಲ್ಲಿ ವಾಯುಸ್ತುತಿ ಪುನಃಶ್ಚರಣ ಸಹಿತ ಸೇವೆ ಮಾಡಿದರೂ – **ಹರೇರ್ವಿರುದ್ಧಮ್ ನಕರೋತಿ ವಾಯುಃ** – ಎಂಬಂತೆ ಶ್ರೀಹರಿಯೇ ಕೈಬಿಟ್ಟ ಮೇಲೆ ನನ್ನದೇನೆಂಬಂತೆ ವಾಯುದೇವರ ಕೃಪೆಯೂ ಇವರಿಗಾಗಲಿಲ್ಲ.

ಹರಿ ಮುನಿದರೇ ಗುರು ಪರಿಹರಿಸುವ – ಎಂದು ಶ್ರೀವಿಜಯದಾಸರೇ ಹೇಳಿದಂತೆ ಇದರ ಸತ್ಯತೆಯನ್ನು ಶ್ರೀರಾಘವೇಂದ್ರಗುರುಸಾರ್ವಭೌಮರಲ್ಲಿ ತೋರಬೇಕೆಂಬುದೇ ಶ್ರೀಹರಿಯ ಇಚ್ಛೆ. ಆಚಾರ್ಯರು ಸಹಿತ ಮಂತ್ರಾಲಯಕ್ಕೆ ಬಂದು ಪರಮಕರುಣಾಳುಗಳಾದ ಶ್ರೀಗುರುರಾಜರಲ್ಲಿ ಮೊರೆಹೊಕ್ಕರು. ಆಚಾರ್ಯರು ಶ್ರೀರಾಯರಲ್ಲಿ ತಮ್ಮ ಪಾದೋದಕ ಸ್ವೀಕರಿಸಿ ಪ್ರೋಕ್ಷಿಸಿಕೊಂಡರೇ ದಾರಿದ್ರ್ಯದಿಂದ ಮುಕ್ತರಾಗಿಲ್ಲವೇ? ನಿಮ್ಮನ್ನು ಸೇವಿಸುವ ಜನರಿಗೆ ನೋವೆಂಬುದೇ ಇಲ್ಲವೆಂಬುದು ಸಿದ್ಧವಾಗಿದೆಯಲ್ಲವೇ? ಅತಿ ಭಯಂಕರವಾಗಿ ಪೀಡಿಸುತ್ತಿರುವ ನನ್ನ ಈ ವ್ಯಾಧಿಯನ್ನು ಪರಿಹರಿಸಿ ಉದ್ಧಾರ ಮಾಡಿ. ನೀವೆ ನನಗೆ ತಂದೆ, ತಾಯಿ ಮತ್ತೂ ನಿಮ್ಮನ್ನೇ ನಂಬಿ ಬಂದಿದ್ದೇನೆಂದು ಅತಿ ದೈನ್ಯದಿಂದ ಪ್ರಾರ್ಥಿಸುತ್ತಾ ಮೂರ್ಛಿತರಾದರು. ಆಚಾರ್ಯರ ಮೇಲೆ ಕರುಣಾ ದೃಷ್ಟಿಯನ್ನು ಬೀರುತ್ತಾ ಶ್ರೀರಾಯರು ಕಾಣಿಸಿಕೊಂಡು **“ ನೀನು ಭಕ್ತ ಶಿರೋಮಣಿಯಾದ ಶ್ರೀವಿಜಯದಾಸರಲ್ಲಿ ಮಾಡಿದ ಅಪರಾಧದಿಂದ ಈ ರೀತಿ ಯಾತನೆಯನ್ನು ಅನುಭವಿಸಬೇಕಾಯಿತು. ಆದ್ದರಿಂದ ಪುನಃ ಅವರಲ್ಲೇ ಹೋಗಿ ಕ್ಷಮೆಯನ್ನು ಯಾಚಿಸು. ಅವರು ನಿನ್ನನ್ನು ಅನುಗ್ರಹಿಸುತ್ತಾರೆ. ಅವರಲ್ಲಿ ಹೋಗಲು ನಾವು ನಿನಗೆ ಶಕ್ತಿಯನ್ನು ಮಾತ್ರ ಕೊಡುತ್ತೇವೆ ”** – ಎಂದು ಹೇಳಿ ಅವರ ಕೈಗೆ ಫಲ ಮಂತ್ರಾಕ್ಷತೆ ಕೊಟ್ಟು ಅದೃಶ್ಯರಾದರು.

ಇಷ್ಟಾದ ಮೇಲೆ ಆಚಾರ್ಯರಿಗೆ ಎಚ್ಚರವಾಯಿತು. ಕೈಯಲ್ಲಿ ಫಲ ಮಂತ್ರಾಕ್ಷತೆ ಇದೆ. ಆಚಾರ್ಯರು ಸಂತೋಷದಿಂದ ಶ್ರೀವಿಜಯದಾಸರ ಸ್ಮರಣೆ ಮಾಡುತ್ತಾ ತಮ್ಮ ತಾಯಿ, ಪತ್ನಿಗೆ ಈ ವೃತ್ತಾಂತವನ್ನು ತಿಳಿಸಿ ಅವರ ಸಹಾಯದಿಂದ ನದಿಯಲ್ಲಿ ಸ್ನಾನ ಮಾಡಿ ಶ್ರೀಗುರುರಾಜರ ದರ್ಶನ, ಪಾದೋದಕ, ಹಸ್ತೋದಕ ಸ್ವೀಕರಿಸಿ ಶ್ರೀಗುರುರಾಜರ ಆದೇಶದಂತೆ ಚಿಪ್ಪಗಿರಿಗೆ ಪ್ರಯಾಣ ಬೆಳೆಸಿದರು.

ಆಚಾರ್ಯರು ಚಿಪ್ಪಗಿರಿಗೆ ಬಂದು ಶ್ರೀವಿಜಯದಾಸರನ್ನು ಕಂಡು ಭಕ್ತಿಭಾವದಿಂದ ಸಾಷ್ಟಾಂಗ ನಮಸ್ಕಾರ ಮಾಡಿ ಸ್ವಾಮೀ ಉದ್ಧಾರ ಮಾಡಬೇಕೆಂದು ಅವರ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು, ವಿನಮ್ರದಿಂದ ಸ್ವಾಮೀ ತಾವೂ ಅಲ್ಪನಾದ ನನ್ನ ಅಪರಾಧವನ್ನು ಕ್ಷಮಿಸಿ ಉದ್ಧರಿಸುವ ವಾಗ್ದಾನವಿತ್ತರೇ ಮಾತ್ರ ತಮ್ಮ ಪಾದಗಳನ್ನು ಬಿಡುತ್ತೇನೆಂದು ಇಲ್ಲವೇ ತಮ್ಮ ಪಾದಗಳ ಮೇಲೆ ನನ್ನ ಪ್ರಾಣವನ್ನೇ ಬಿಡುತ್ತೇನೆಂದರು. ಈ ರೀತಿ ದೃಢಭಕ್ತಿ, ಪಶ್ಚಾತ್ತಾಪದಿಂದ ಪರಿಶುದ್ಧರಾಗಿ ಬಂದಿರುವ ಆಚಾರ್ಯರನ್ನು ಶ್ರೀವಿಜಯದಾಸರು ತಮ್ಮ ಅಮೃತಮಯವಾದ ಹಸ್ತಗಳಿಂದ ಹಿಡಿದೆಬ್ಬಿಸಿ, ವತ್ಸಾ ಶ್ರೀರಾಘವೇಂದ್ರಗುರುಸಾರ್ವಭೌಮರ ವಿಶೇಷಾನುಗ್ರಹಕ್ಕೆ ಪಾತ್ರನಾದ ನಿನ್ನ ದುರಿತಗಳೆಲ್ಲವೂ ಸ್ವಲ್ಪ ಕಾಲದಲ್ಲೇ ಪರಿಹಾರವಾಗುವುದರಲ್ಲಿ ಸಂದೇಹವಿಲ್ಲ. ಉತ್ತನೂರಿನಲ್ಲಿ ಭಾಗಣ್ಣನಿದ್ದಾನೆ. ಅವನಲ್ಲಿಗೆ ಹೋಗು ನಿನಗೆ ಕ್ಷೇಮವಾಗುತ್ತದೆ ಎಂದು ಶ್ರೀವಿಜಯದಾಸರು ಆಚಾರ್ಯರನ್ನು ಶ್ರೀಗೋಪಾಲದಾಸರಲ್ಲಿಗೆ ಕಳುಹಿಸಿಕೊಟ್ಟರು.

ಶ್ರೀಗುರುಸಾರ್ವಭೌಮರ ಕಾರುಣ್ಯ, ಶ್ರೀವಿಜಯದಾಸರ ಅಭಯ ವಚನಗಳಿಂದ ಆಚಾರ್ಯರಿಗೆ ನವಚೈತನ್ಯ ಬಂದಂತಾಯಿತು. ಒಣಗಿದ್ದ ಉತ್ಸಾಹವು ಚಿಗುರೊಡೆಯಿತು.

ಆಚಾರ್ಯರು ಉತ್ತನೂರು ಸೇರಿದ ತಕ್ಷಣ ಶ್ರೀವಿಜಯದಾಸರು ತಮ್ಮ ಯೋಗ ಸಾಮಾರ್ಥ್ಯದಿಂದ ಶ್ರೀಗೋಪಾಲದಾಸರಿಗೆ ವೈಷ್ಣವ ಕುಲದ ಉದ್ಧಾರಾರ್ಥವಾಗಿ ಆಚಾರ್ಯರನ್ನು ಅನುಗ್ರಹಿಸಿ, ಅವರ ವ್ಯಾಧಿ ನಿವಾರಿಸಿ, ನಲವತ್ತು ವರ್ಷಗಳ ಆಯುರ್ದಾನವನ್ನು ತಮ್ಮ ಹಾಗೂ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನಾರಾಯಣನ ಪ್ರೀತ್ಯರ್ಥವಾಗಿ ನೀಡಿ ಉದ್ಧರಿಸಬೇಕೆಂದು ಆದೇಶಿಸಿದರು. ಶ್ರೀವಿಜಯದಾಸರ ಆದೇಶವನ್ನು ಶಿರಸಾ ವಹಿಸಿ ತ್ಯಾಗಕ್ಕೆ ಸಿದ್ಧರಾದರು. ಇದು ಯೋಗಿಗಳಿಗೆ ಮಾತ್ರ ಸಾಧ್ಯ.

ಆಚಾರ್ಯರು ಶ್ರೀವಿಜಯದಾಸರ ಆಜ್ಞೆಯಂತೆ ಉತ್ತನೂರಿಗೆ ಬಂದರು. ಆಚಾರ್ಯರು ಉತ್ತನೂರಿಗೆ ಬರುತ್ತಿದ್ದಂತೆಯೇ ಶ್ರೀ ಶ್ರೀನಿವಾಸದೇವರ ಗುಡಿ ಹತ್ತಿರವೇ ತಲೆ ಬಾಗಿಸಿಕೊಂಡು ಶ್ರೀವಿಜಯದಾಸರ ಸ್ಮರಣೆ, ಸುಳಾದಿ ಪಠಿಸುತ್ತಾ ಕಸ ಗೂಡಿಸುವ ಕೆಲಸದಲ್ಲಿ ತೊಡಗಿದ್ದ ಶ್ರೀಗೋಪಾಲದಾಸರನ್ನು ಕಂಡು ಅವರ ಮನೆಯೆಲ್ಲಿದೆ ಎಂದು ಕೇಳಿದಾಗ ಹತ್ತಿರದಲ್ಲೇ ಇದೆ ಎಂದು ಅವರ ಮನೆಯನ್ನು ತೋರಿಸಿದರು. ಮನೆಯಲ್ಲಿ ವಿಚಾರಿಸಲಾಗಿ ಅವರು ಗುಡಿಯಲ್ಲಿದ್ದಾರೆಂದು ತಿಳಿದು, ಕಸ ಗೂಡಿಸುವವರೇ ಶ್ರೀ ಗೋಪಾಲದಾಸರೆಂದು ತಿಳಿದ ಮೇಲೆ ಅವರ ವಿನಯ, ಸೌಜನ್ಯ, ಸೌಶೀಲ್ಯಾದಿಗುಣಗಳಿಗೆ ಮಾರು ಹೋಗಿ ಅವರಿಗೆ ಅಡ್ಡಬಿದ್ದು, ತಾವು ಬಂದ ವಿಷಯವನ್ನು ತಿಳಿಸಿ ತಮ್ಮನ್ನು ಉದ್ಧಾರ ಮಾಡಬೇಕೆಂದು ಪ್ರಾರ್ಥಿಸಿದರು. ಆಚಾರ್ಯರ ಇಂಗಿತವನ್ನರಿತ ಶ್ರೀಗೋಪಾಲದಾಸರು ತಮ್ಮ ಸ್ವಭಾವ ಸಿದ್ಧವಾಗಿದ್ದ ಸಲುಗೆಯ ಮಾತಿನಿಂದ ***" ಆಚಾರ್ಯರೇ ಬನ್ನಿ, ದೊಡ್ಡವರ ಅನುಗ್ರಹವನ್ನು ಹೊತ್ತು ಬಂದಿದ್ದೀರಿ. ಇನ್ನೇನು ನಿಮಗೆ ಸಮಾನರಾದವರು ಯಾರಿದ್ದಾರೆ. ಬನ್ನಿ ಕುಳಿತುಕೊಳ್ಳಿ ಎಂದು ಅವರನ್ನು ಕುಶಲ ಪ್ರಶ್ನೆ ಮಾಡಿದರು. ಇಬ್ಬರ ಹೃದಯ ಸ್ಪಂದನವೂ ಶ್ರೀವಿಜಯದಾಸರ ನಾಮವೇ"*** ಆಗಿತ್ತು.

ಶ್ರೀಗೋಪಾಲದಾಸರು ಪದ್ಧತಿಯಂತೆ ಗೋಪಾಳಕ್ಕೆ ಹೋದರು. ಅಂದು ಅವರಿಗೆ ಕೆಂಪು ಜೋಳವು ಮಾತ್ರ ಪ್ರಾಪ್ತವಾಯಿತು. ಆ ಕೆಂಪು ಜೋಳವನ್ನೇ ಹಿಟ್ಟು ಮಾಡಿ, ಸ್ವತಃ ತಾವೇ ರೊಟ್ಟಿಯನ್ನು ಮಾಡಿ, ಆ ಭಕ್ಕರಿಯನ್ನು ಅನ್ನಾದಿಗತ ಚತುರವಿಂಶತಿ ತತ್ವಪತಿಗಳಂತರ್ಯಾಮಿ ಶ್ರೀಪ್ರಾಣಪತಿ ಲಕ್ಷ್ಮೀಪತಿಗರ್ಪಿಸಿ, ತಮ್ಮ ಯೋಗ ಸಾಮಾರ್ಥ್ಯದಿಂದ ತಮ್ಮ ನಲವತ್ತು ವರ್ಷಗಳ ಆಯುಷ್ಯವನ್ನು ಈ ಭಕ್ಕರಿಯಲ್ಲಿ ಆವಾಹಿಸಿ ಆಚಾರ್ಯರನ್ನು ಊಟಕ್ಕೆ ಕುಳ್ಳರಿಸಿ ***" ಆಚಾರ್ಯರೇ, ವಿದ್ವತ್ಸಭೆಗಳಲ್ಲಿ ಮಾನಿತರಾಗಿ ಬಿರುದು ಬಾವಲಿಗಳಿಂದ ಮತ್ತೂ ಮೃಷ್ಟಾನ್ನ ಸ್ವೀಕರಿಸಿದ ತಮಗೆ ಈ ಬಡ ದಾಸನ ಮನೆಯಲ್ಲಿ ಭಕ್ಕರಿಯ ಭೋಜನವಾಗುತ್ತಿದೆಯಲ್ಲಾ ಸವಧಾನ "*** ಎಂದರು.

ಬಹುದಿನಗಳಿಂದ ಆಹಾರವನ್ನೇ ಕಾಣದೇ ಕಂಗಾಲಾಗಿದ್ದ ಆಚಾರ್ಯರಿಗೆ ಹರಿವಾಯುಗುರುಗಳ ಅನುಗ್ರಹದಿಂದ ತಿನ್ನಬೇಕೆನಿಸಿತು. ಅದೇ ಭಾಗ್ಯ. ಅದನ್ನೇ ಆಚಾರ್ಯರು ಆಶ್ಚರ್ಯದಿಂದ ಅಭಿವ್ಯಕ್ತಪಡಿಸಿದರು. ಈಗ ಶ್ರೀಗೋಪಾಲದಾಸರು ಗುರ್ವಾನುಗ್ರಹವಿಲ್ಲದೇ ಅಪರೋಕ್ಷಜ್ಞಾನವಾಗದು ಮತ್ತು ಸದ್ಗುರುಗಳ ಅನುಗ್ರಹವು ಎಂದಿಗೂ ವ್ಯರ್ಥವಾಗಲಾರದು. ನಮ್ಮ ಗುರುಗಳ ಅಪೇಕ್ಷೆಯಂತೆ ನಾವು ನಿಮಗೆ ಹೇಳುತ್ತಿರುವುದೇನೆಂದರೆ ತರ್ಕ ಮಾಡುವುದನ್ನು ಬಿಟ್ಟು ಮುಂದಿನ ಸಾಧನೆಯನ್ನು ಮಾಡಿಕೊಳ್ಳಿ. ನಿಮ್ಮ ಮುಂದಿನ ಭವಿಷ್ಯವನ್ನು ನೆನೆದು ನಮಗೆ ಅತ್ಯಂತ ಸಂತೋಷವಾಗಿದೆ. ಶ್ರೀಗೋಪಾಲದಾಸರು ಆಚಾರ್ಯರಿಗೆ ಭಕ್ಕರಿಯನ್ನು ನೀಡುತ್ತಾ ....

***ಎನ್ನ ಬಿನ್ನಪ ಕೇಳೋ ಧನ್ವಂತ್ರಿ ದಯಮಾಡೋ ಸಣ್ಣವನು ಇವ ಕೇವಲಾ ॥ ಪಲ್ಲವಿ ॥***

***ಬನ್ನ ಬಡಿಸುವ ರೋಗವನ್ನು ಮೋಚನೆ ಮಾಡಿ ಚೆನ್ನಾಗಿ ಪಾಲಿಸುವುದೋ ಕರುಣೀ***

***॥ ಅ.ಪ ॥***

ಎಂದು ಹಾಡುತ್ತಾ ತಿನ್ನಲು ಹೇಳಿದರು. ಭಕ್ಕರಿಯನ್ನು ತಿಂದ ಕೂಡಲೇ ರೋಗವು ದಿನಕ್ರಮೇಣ ಇಳಿಮುಖವಾಯಿತು. ಗುರುಗಳ ಆಜ್ಞೆಯೆಂದರೇ ಆಯುಷ್ಯಕ್ಕಿಂತಲೂ ಮಿಗಿಲೆಂಬುದನು ತಿಳಿದು ಎಂತಹ ತ್ಯಾಗವನ್ನು ಶ್ರೀಗೋಪಾಲದಾಸರು ಮಾಡಿದ್ದಾರೆ. ಇದು ಶ್ರೀಗೋಪಾಲದಾಸರಿಗೆ ಶ್ರೀವಿಜಯದಾಸರ ಮೇಲಿರುವ ಗುರುಭಕ್ತಿ.

# ತಿರುಪತಿ ಯಾತ್ರೆ

ಶ್ರೀಗೋಪಾಲದಾಸರು ಪ್ರತಿವರ್ಷದಂತೆ ಈ ವರ್ಷವೂ ಶ್ರೀನಿವಾಸನ ಬ್ರಹ್ಮೋತ್ಸವಕ್ಕೆ ಹೋಗಲು ಸಿದ್ಧರಾದರು. ಶ್ರೀನಿವಾಸಾಚಾರ್ಯರು ಕೂಡಾ ಜೊತೆಯಲ್ಲಿ ಹೋಗಲು ನಿರ್ಧರಿಸಿದರು. ತಮ್ಮ ಇಂಗಿತವನ್ನು ಶ್ರೀಗೋಪಾಲದಾಸರ ಮುಂದೆ ನಿವೇದಿಸಿಕೊಂಡರು. ಆದರೇ ಶ್ರೀಗೊಪಾಲದಾಸರು ಒಪ್ಪಲಿಲ್ಲ.

ಕಾರಣ ತೀರ್ಥಯಾತ್ರೆ ಬಹಳ ಕಷ್ಟವಾಗಿದ್ದೂ ಈಗತಾನೇ ಕಾಯಿಲೆಯಿಂದ ಚೇತರಿಸಿಕೊಂಡು ಪುನರ್ಜನ್ಮ ಹೊಂದಿದ್ದು, ಪ್ರಸ್ತುತ ವಿಶ್ರಾಂತಿಯಲ್ಲಿದ್ದರೇ ಸಾಕೆಂದು ಆಚಾರ್ಯರಿಗೆ ಹೇಳಿದರು. ಆದರೆ ಶ್ರೀಗೋಪಾಲದಾಸರೊಡನೆ ತಿರುಪತಿಗೆ ಹೋಗಲು ಹೆಜ್ಜೆ ಹಾಕಿಯೇ ಬಿಟ್ಟರು. ಪರ್ವತಾರೋಹಣದಿಂದ ಆಚಾರ್ಯರು ಬಳಲಿದರು. ದೇವರ ದರ್ಶನ ಪಡೆದು ವಿಶ್ರಾಂತಿ ಪಡೆಯಲು ಪವಳಿಸಿದರು. ಆಚಾರ್ಯರು ಆಶಕ್ತರಾಗಿ ಬಳಲುತ್ತಿದ್ದರಿಂದ ಹೊಟ್ಟೆಗೆ ಏನಾದರೂ ಸ್ವೀಕರಿಸಿದರೇ ಬಳಲಿಕೆಯು ಕಡಿಮೆಯಾಗುತ್ತದೆಂದು ಪ್ರಸಾದವನ್ನು ತರಲು ದೇವಾಲಯಕ್ಕೆ ಹೊರಟರು. ಶ್ರೀ ಗೋಪಾಲದಾಸರು ಅತ್ತ ಹೊರಟದ್ದೇ ತಡ, ಇತ್ತ ಶ್ರೀಶ್ರೀನಿವಾಸನು ಶ್ರೀಗೋಪಾಲದಾಸರ ರೂಪದಿಂದಲೇ ಬಂದು ಆಚಾರ್ಯರ ಮೈದಡವಿ ಅಮೃತ ಸದೃಶವಾದ ನೈವೇದ್ಯವನ್ನು ಆಚಾರ್ಯರಿಗೆ ಉಣಿಸಿ ಅದೃಶ್ಯನಾದನು. ಇದರಿಂದ ಆಚಾರ್ಯರ ಆಯಾಸವು ಪರಿಹಾರವಾಗಿ ಚೈತನ್ಯ ಉಂಟಾಯಿತು.

ಶ್ರೀಗೋಪಾಲದಾಸರು ಶ್ರೀಹರಿಯ ಪ್ರಸಾದವನ್ನು ತಂದು ಆಚಾರ್ಯರೇ ಸ್ವಲ್ಪ ಪ್ರಸಾದ ಸ್ವೀಕರಿಸಿ, ನಿಮ್ಮ ಆಯಾಸವು ಪರಿಹಾರವಾಗುವುದೆಂದು ಹೇಳಿದರು. ಆದರೆ ಆಚಾರ್ಯರು ಆಶ್ಚರ್ಯದಿಂದ ಸ್ವಾಮೀ, ಈಗಾಗಲೇ ತಾವು ನೀಡಿದ ಪ್ರಸಾದ – ಜಲಪಾನದಿಂದ ನನ್ನ ಆಯಾಸವು ಪರಿಹಾರವಾಗಿದೆ. ಈ ಮಾತುಗಳನ್ನು ಕೇಳಿ ಶ್ರೀಗೋಪಾಲದಾಸರು ಆಶ್ಚರ್ಯದಿಂದ ನೀವು ಹೇಳುತ್ತಿರುವುದು ಏನು? ನಾನು ಈಗ ತಾನೆ ಬರುತ್ತಿದ್ದೇನೆಂದು ನುಡಿದು, ಧ್ಯಾನಾಸಕ್ತರಾದಾಗ ಶ್ರೀಶ್ರೀನಿವಾಸನು ದಾಸರ ರೂಪದಲ್ಲಿ ದಾಸರಿಗೆ ಕಾಣಿಸಿಕೊಂಡನು. ಆಗ ಶ್ರೀಗೋಪಾಲದಾಸರು ಸ್ವಾಮೀ ನಿನ್ನ ಲೀಲೆ ಅಗಾಧ. ನನ್ನ ರೂಪವನ್ನು ಧರಿಸಿ, ಅಲ್ಲ ನೀನೇ ನನಗೆ ಕೊಟ್ಟ ರೂಪವನ್ನು ನೀನೇ ಪ್ರಕಟಿಸಿ, ನೀನು ಆಚಾರ್ಯರನ್ನು ಸಂತೈಸಿರುವೆಯಲ್ಲಾ ಅದಕ್ಕಾಗಿಯೇ ನಮ್ಮ ಗುರುಗಳು ನಿನ್ನನ್ನು **“ ಭಳಿರೇ ತಿರುಮಲರಾಯ ನಿನ್ನಾ ಕರುಣಾರಸಕೆ ನೆಲೆಗಾಣೆ ನೆಲೆಗಾಣೆ ”** ಎಂದು ಕೊಂಡಾಡಿದ್ದಾರೆಂದು ಸ್ಮರಿಸುತ್ತಾ ಬಹಿರ್ಮುಖರಾಗಿ ಆಚಾರ್ಯರೇ ನೀವು ಧನ್ಯರು ಧನ್ಯರು.

ಈ ಹಿಂದೆ ಪ್ರಸಾದವನ್ನು ತಂದು ಕೊಟ್ಟವನು ನಾನಲ್ಲ. ಶ್ರೀಶ್ರೀನಿವಾಸನೇ ನನ್ನ ರೂಪದಿಂದ ಪ್ರಸಾದವನ್ನು ಕೊಟ್ಟು ಅನುಗ್ರಹಿಸಿರುತಾನೆ. ಇಂದು ನಿಮಗೆ ಭಗವದ್ದರ್ಶನವಾಯಿತು. ನಮ್ಮ ಗುರುಗಳ ಕರುಣೆಗೆ ಪಾತ್ರರಾದವರಿಗೆ ದೊರೆಯುವ ಭಾಗ್ಯವೆಂದರೆ ಇಂಥಹುದೇ ಎಂದಾಗ ಆಚಾರ್ಯರಿಗೆ ರೋಮಾಂಚನ ಮತ್ತು ಕಣ್ಣುಗಳಲ್ಲಿ ಆನಂದಭಾಷ್ಪಗಳುದರಿದವು.

ಆದಿನ ಶ್ರೀನಿವಾಸಾಚಾರ್ಯರಿಗೆ ಸ್ವಪ್ನವಾಗಿದೆ. ಆ ಸ್ವಪ್ನದಲ್ಲಿ ಶ್ರೀರಾಘವೇಂದ್ರಗುರುಸಾರ್ವಭೌಮರು ತಮ್ಮನ್ನು ಶ್ರೀವಿಜಯರಾಯರಿಗೆ, ಶ್ರೀವಿಜಯದಾಸರು ಶ್ರೀಗೋಪಾಲದಾಸರಿಗೆ, ಶ್ರೀಗೋಪಾಲದಾಸರು ಶ್ರೀಶ್ರೀನಿವಾಸನಿಗೆ ಒಪ್ಪಿಸಿದಂತೆ, ಆಚಾರ್ಯರು ದಾಸ ವೇಷವನ್ನು ಧರಿಸಿ ಶ್ರೀಶ್ರೀನಿವಾಸನ ಮುಂದೆ ಹರಿಕಥೆ ಹೇಳುತ್ತಿರುವಂತೆ ಕಂಡರು.

ಆಚಾರ್ಯರು ತಮ್ಮ ಸ್ವಪ್ನ ವೃತ್ತಾಂತವನ್ನು ಶ್ರೀಗೋಪಾಲದಾಸರಿಗೆ ವಿವರವಾಗಿ ತಿಳಿಸಿದರು. ತಮ್ಮ ಅಂತರ್ಯಾಮಿಯಾದ ಶ್ರೀಶ್ರೀನಿವಾಸನನ್ನು ಶ್ರೀವಿಜಯದಾಸರ ದ್ವಾರಾ ಚಿಂತಿಸಲು ಹೇಳಿ, ಈ ಉಪಾಸನೆಯು ಬಿಂಬ ದರ್ಶನಕ್ಕೆ ಕಾರಣವಾಗುವುದೆಂದು ಕೆಲವು ರಹಸ್ಯಗಳನ್ನು ಅವರಿಗೆ ಹೇಳಿ ಶ್ರೀಶ್ರೀನಿವಾಸನ ಸೇವಾ ಕೈಂಕರ್ಯಗಳನ್ನು ವಿಧಿವತ್ತಾಗಿ ಮುಗಿಸಿ ಉತ್ತನೂರಿಗೆ ವಾಪಾಸಾದರು.

ಶ್ರೀವಿಜಯದಾಸರು ಶ್ರೀಗೊಪಾಲದಾಸರನ್ನು ಮಾಧ್ಯಮವಾಗಿಟ್ಟುಕೊಂಡು ಶ್ರೀನಿವಾಸಾಚಾರ್ಯರ ಮೇಲೆ ತೋರಿದ ಕಾರುಣ್ಯ.

# ಅಂಕಿತ ಪ್ರದಾನ

ಶ್ರೀನಿವಾಸಾಚಾರ್ಯರು ಶ್ರೀಗೋಪಾಲದಾಸರನ್ನು ನನಗೆ ಹರಿದಾಸ ದೀಕ್ಷೆಯನ್ನು ನೀಡಿ ಅಂಕಿತ ಪ್ರದಾನ ಮಾಡಿ ಎಂದು ಪರಿಪರಿಯಿಂದ ಬೇಡಿಕೊಳ್ಳುತ್ತಿದ್ದರು. ಒಂದು ದಿನ ಶ್ರೀಗೋಪಾಲದಾಸರು ಆಚಾರ್ಯರೇ ಶ್ರೀಪಾಂಡುರಂಗನಿಗೆ ನಿಮ್ಮ ಮೇಲೆ ಕರುಣೆಯುಂಟಾಗಿದೆ. ಆದ್ದರಿಂದ ನೀವು ಶೀಘ್ರವಾಗಿ ಪಂಢರಾಪುರಕ್ಕೆ ಹೋಗಿ ಶ್ರೀಪಾಂಡುರಂಗನ ಸೇವೆ ಮಾಡಿ. ಅಲ್ಲೇ ನಿಮಗೆ ಶ್ರೀಪಾಂಡುರಂಗನಿಂದಲೇ ಅಂಕಿತವು ಪ್ರಾಪ್ತವಾಗುತ್ತದೆ. ಅಂದೇ ನಿಮಗೆ ಬಿಂಬಾಪರೋಕ್ಷವಾಗುತ್ತದೆ. ನೀವು ಶ್ರೇಷ್ಠ ಹರಿದಾಸರಾಗುವಿರಿ ಎಂದು ಭವಿಷ್ಯವನ್ನು ನುಡಿದು ಆಶೀರ್ವಾದ ಮಾಡಿ ಕಳಿಸಿದರು.

ಆಚಾರ್ಯರು ಪಂಢರಾಪುರಕ್ಕೆ ಬಂದು ಶ್ರೀಪಾಂಡುರಂಗನ ದರ್ಶನದಿಂದ ಪುಳಕಿತರಾದರು. ನಿತ್ಯವೂ ಚಂದ್ರಭಾಗಾ ನದಿಯಲ್ಲಿ ಸ್ನಾನ, ಅಹ್ನೀಕ, ಪೂಜಾದಿಗಳನ್ನು ಮಾಡುತ್ತಾ ಶ್ರೀಪಾಂಡುರಂಗನ ಸೇವೆ ಮಾಡುತ್ತಿದ್ದರು. ಎಂದಿನಂತೆ ಅಂದು ಆಚಾರ್ಯರು ಚಂದ್ರಭಾಗಾನದಿಯಲ್ಲಿ ಜಲವನ್ನು ಪ್ರೋಕ್ಷಿಸಿಕೊಂಡು ಸ್ನಾನಕ್ಕಾಗಿ ಇಳಿದು, ಸಂಕಲ್ಪ ಮಾಡಿ ನೀರಿನಲ್ಲಿ ಮುಳಿಗಿದರು.

ಈ ರೀತಿ ಮೂರನೇಬಾರಿ ಮುಳಿಗೆದ್ದರೇ ಆಶ್ಚರ್ಯವೋ ಆಶ್ಚರ್ಯ! ಆಚಾರ್ಯರ ತಲೆಯ ಮೇಲೊಂದು ಸಾಲಿಗ್ರಾಮದ ಶಿಲೆಯು ತಡವಿಕೊಂಡು ಬಂದು ಅವರ ಕೈಗೆ ಸಿಕ್ಕಿತು. ಅದನ್ನು ಕೈಗೆತ್ತಿಕೊಂಡು ನೋಡುತ್ತಾರೇ ಆ ಶಿಲೆಯ ಮೇಳೆ ***"ಜಗನ್ನಾಥವಿಠಲ"*** ಎಂಬ ಅಕ್ಷರಗಳು ಕಾಣುತ್ತವೆ. ಅದನ್ನು ಕಂಡ ಮರುಕ್ಷಣದಲ್ಲೇ ಶ್ರೀವಿಜಯದಾಸರು ನುಡಿದಂತೆ, ಆಚಾರ್ಯರಿಗೆ ಮಿಂಚು ಹೊಳೆದಂತೆ ಶ್ರಿಪಾಂಡುರಂಗನ ದರ್ಶನವಾಯಿತು. ಅಂದಿನಿಂದ ಶ್ರೀನಿವಾಸಾಚಾರ್ಯರು ಶ್ರೀಜಗನ್ನಾಥದಾಸರಾಗಿ ಅನೇಕ ಪದ – ಪದ್ಯ – ಸುಳಾದಿ – ಉಗಾಭೋಗಗಳನ್ನು ರಚಿಸಿದರಲ್ಲದೇ, ಶ್ರೀಗೋಪಾಲ – ಶ್ರೀವಿಜಯ – ಶ್ರೀರಾಘವೇಂದ್ರಗುರ್ವಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಮನ್ಮೂಲರಘುಪತಿವೇದವ್ಯಾಸದೇವರಿಗೆ ಸಮ್ಮತವಾಗುವ ರೀತಿಯಲ್ಲಿ ಸಕಲ – ವೇದ – ವೇದಾಂತ – ಪುರಾಣ – ಉಪನಿಷತ್ – ಸೂತ್ರಗಳಲ್ಲಿ ಅಡಗಿದ ಪ್ರಮೇಯ ಭಾಗಗಳನ್ನು ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಕನ್ನಡ ಭಾಷೆಯಲ್ಲಿ ಸರಳ ಸುಂದರ ಪದ್ಯಗಳಿಂದ ಅತ್ಯಂತ ಅರ್ಥಗರ್ಭಿತವಾಗಿ **"ಹರಿಕಥಾಮೃತಸಾರ"** ಎಂಬ ಗ್ರಂಥವನ್ನು ರಚಿಸಿ ಮಹದುಪಕಾರಮಾಡಿ ಭಾದ್ರಪದ ಶುದ್ಧ ನವಮೀ ಮಾನವಿ ಕ್ಷೇತ್ರದಲ್ಲಿ ಶ್ರೀಜಗನ್ನಾಥದಾಸರು ಶ್ರೀಹರಿಪದ ಸೇರಿದರು.

***ಜಲಜೇಷ್ಠನಿಭಾಕಾರಂ ಜಗದೀಶಪದಾಶ್ರಯಂ ।***

***ಜಗತೀತಲವಿಖ್ಯಾತಂ ಜಗನ್ನಾಥಗುರುಂಭಜೇ ॥***